**ಸಾಕ್ಷಿಗೆ ದಿನಾಂಕಃ 29.05.2024 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲು ಃ ಪ್ರತಿವಾದಿ 14 ಮತ್ತು 15 ರವರ ಪರ ಶ್ರೀ. ಕೆ ಆರ್ ಎಸ್ ವಕೀಲರಿಂದ ಃ**

1. ನನ್ನ ತಂದೆ ಶ್ರೀ ಶ್ರೀನಿವಾಸ್ ಭಟ್ ರವರು ನಮ್ಮ ಕುಟುಂಬದ ಮುಖ್ಯಸ್ಥರಾಗಿ ಹಾಗೂ ಕರ್ತರಾಗಿ ಇದ್ದರು ಎಂದರೆ ಸರಿ. ನನ್ನ ತಂದೆ ಶ್ರೀನಿವಾಸ್ ಭಟ್ ರವರ ಬಳಿ ಇದ್ದ ಎಲ್ಲಾ ಆಸ್ತಿಗಳು ಅವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಅವರ ಜೀವಿತ ಕಾಲದಲ್ಲಿ ಅವರ ಎಲ್ಲಾ ಗಂಡು ಮಕ್ಕಳು ಅವರೊಟ್ಟಿಗೆ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದರೆ ಸರಿ. ಶ್ರೀನಿವಾಸ್ ಭಟ್ ರವರು ತೀರಿಕೊಂಡ ನಂತರ ಅವರ ಪತ್ನಿ ಶಾಂತಲಕ್ಷ್ಮಮ್ಮ ಮತ್ತು ಅವರ ಗಂಡು ಮಕ್ಕಳು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿಯು ನಾನು ಸಹ ಅವರೆಲ್ಲರ ಜೊತೆ ವಾಸವಾಗಿದ್ದೆ ಎಂದು ನುಡಿಯುತ್ತಾರೆ.

2. ನಿಪಿ-2 ರಂತೆ ಶ್ರೀಮತಿ ಶಾಂತಲಕ್ಷ್ಮಮ್ಮ ಮತ್ತು ಅವರ ಗಂಡು ಮಕ್ಕಳ ನಡುವೆ ದಿನಾಂಕಃ 21.04.1980 ರಂದು ಒಟ್ಟು ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ವಿಭಾಗವಾಗಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಆದರೆ ಸದರಿ ವಿಷಯ ನನಗೆ 2017 ರಲ್ಲಿ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ನಿಪಿ-2 ರಂತೆ ವಿಭಾಗವಾದ ಬಳಿಕ ನಿಪಿ-3 ರಂತೆ ಹಿಸ್ಸಾದಾರರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿ ವಿಷಯವೂ ಸಹ ನನಗೆ 2017 ರಲ್ಲೇ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-2 ವಿಭಾಗಪತ್ರದಡಿ ಶಾಂತಲಕ್ಷ್ಮಮ್ಮ ರವರ ಹಿಸ್ಸೆಗೆ ದಾವಾ ಅನುಸೂಚಿ ಐಟಂ ನಂಃ 1 ಮತ್ತು 9 ಆಸ್ತಿಗಳು ಹೋಗಿರುತ್ತವೆ ಎಂದರೆ ಸರಿ. ಹಾಗೆಯೇ ನಾಗರಾಜ್ ಭಟ್ /ಪ್ರತಿವಾದಿ 6 ರವರ ಹಿಸ್ಸೆಗೆ ದಾವಾ ಅನುಸೂಚಿ ಐಟಂ ನಂಃ 2, 7 ಮತ್ತು 10 ಆಸ್ತಿಗಳು ಹೋಗಿರುತ್ತವೆ ಎಂದರೆ ಸರಿ. ಹಾಗೆಯೇ ಕುಮಾರಸ್ವಾಮಿ/ಪ್ರತಿವಾದಿ 9 ರವರ ಗಂಡ ರವರ ಹಿಸ್ಸೆಗೆ ದಾವಾ ಅನುಸೂಚಿ ಐಟಂ ನಂಃ 3 ಮತ್ತು 6 ಆಸ್ತಿಗಳು ಹೋಗಿರುತ್ತವೆ ಎಂದರೆ ಸರಿ. ಅದೇ ರೀತಿ ವೆಂಕಟೇಶ್ ಭಟ್/ಪ್ರತಿವಾದಿ 5 ರವರ ಹಿಸ್ಸೆಗೆ ದಾವಾ ಅನುಸೂಚಿ

ಐಟಂ ನಂಃ 4 ಮತ್ತು 5 ಆಸ್ತಿಗಳು ಹೋಗಿರುತ್ತವೆ ಎಂದರೆ ಸರಿ. ನಿಪಿ-2 ವಿಭಾಗಪತ್ರದಡಿ ಪ್ರತಿವಾದಿ 9 ರವರ ಗಂಡನಿಗೆ ಹೋದ ಆಸ್ತಿಗಳ ಖಾತೆ ಅವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಿನಾಂಕಃ 20.03.1986 ರಂದು ನಾಗರಾಜ್ ಭಟ್/ಪ್ರತಿವಾದಿ 6 ರವರ ದಾವಾ ಅನುಸೂಚಿ ಐಟಂ ನಂಃ 10 ಜಾಗವನ್ನು ಪ್ರತಿವಾದಿ 15 ರವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನ್ಯಾಯಾಲಯದ ಆದೇಶದಂತೆ ದಾವಾ ಆಸ್ತಿಗಳನ್ನು ಖರೀದಿ ಮಾಡಿದವರ ಬಗ್ಗೆ ಮಾಹಿತಿ ಪಡೆದು ದಾಖಲೆಗಳನ್ನು ಪರಿಶೀಲಿಸಿದಾಗ ನನಗೆ ಪ್ರತಿವಾದಿ 15 ರವರಿಗೆ ಆಸ್ತಿಯನ್ನು ಪ್ರತಿವಾದಿ 6 ರವರು ಮಾರಾಟ ಮಾಡಿರುವ ಬಗ್ಗೆ 2018 ರಲ್ಲಿ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ 15 ರವರು ಸದರಿ ಆಸ್ತಿಯನ್ನು ಖರೀದಿ ಮಾಡಿದ ನಂತರದಲ್ಲಿ ಅವರ ಕುಟುಂಬದಲ್ಲಿ ವಿಭಾಗವಾದ ಕಾಲಕ್ಕೆ ಸದರಿ ಮೇಲ್ಕಂಡ ದಾವಾ ಅನುಸೂಚಿ ಐಟಂ ನಂಃ 10 ಆಸ್ತಿಯು ಪುನಃ ಪ್ರತಿವಾದಿ 15 ರವರ ಹಿಸ್ಸೆಗೆ ಬಂದಿರುವ ಬಗ್ಗೆ ನಿಪಿ-14 ರಂತೆ ದಾಖಲೆಯಲ್ಲಿ ಕಾಣುತ್ತದೆ ಎಂದರೆ ಸರಿ. ಪ್ರತಿವಾದಿ 15 ರವರು ಪ್ರತಿವಾದಿ 6 ರವರ ಬಳಿಯಿಂದ 1986 ರಲ್ಲಿ ದಾವಾ ಅನುಸೂಚಿ ಐಟಂ ನಂಃ 10 ಆಸ್ತಿಯನ್ನು ಖರೀದಿ ಮಾಡಿದ ತಕ್ಷಣದಲ್ಲೇ ಸದರಿ ಆಸ್ತಿಯ ಖಾತೆಯು ಪ್ರತಿವಾದಿ 15 ರವರ ಹೆಸರಿಗೆ ಮಾರ್ಪಾಡಾಗಿರುತ್ತದೆ ಎಂದರೆ ಸರಿ. 1986 ರಲ್ಲಿ ದಾವಾ ಅನುಸೂಚಿ ಐಟಂ ನಂಃ 10 ಆಸ್ತಿಯು ತರೀ ಜಮೀನಾಗಿತ್ತು ಎಂದರೆ ಸರಿ. ಪ್ರತಿವಾದಿ 6 ರವರು ದಾವಾ ಅನುಸೂಚಿ ಐಟಂ ನಂಃ 10 ಆಸ್ತಿಯನ್ನು ಅವರ ಉಳಿದ ಆಸ್ತಿಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಹಣದ ಅವಶ್ಯಕತೆ ಇದ್ದ ಕಾರಣ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 15 ರವರು ಸದರಿ ಆಸ್ತಿಯನ್ನು ಖರೀದಿ ಮಾಡಿದ ಬಳಿಕ ನಂತರದಲ್ಲಿ ಅಡಿಕೆ ಬೆಳೆ ಬೆಳೆದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. 1986 ರಲ್ಲಿ ಪ್ರತಿವಾದಿ 15 ರವರು ದಾವಾ ಅನುಸೂಚಿ ಐಟಂ ನಂಃ 10 ಆಸ್ತಿಯನ್ನು ಖರೀದಿ ಮಾಡಿದ ದಿನದಿಂದ ಇಲ್ಲಿಯವರೆಗೂ ಅವರ ಸ್ವಾಧೀನದಲ್ಲಿ ಇದೆ ಎಂದರೆ ಸರಿ.

3. ಸಾಮಾನ್ಯವಾಗಿ ಭತ್ತದ ಜಮೀನನ್ನು ಅಡಿಕೆ ತೋಟವಾಗಿ ಮಾರ್ಪಾಡು ಮಾಡಬೇಕಾದರೆ ಲಕ್ಷಾಂತರ ರೂಪಾಯಿ ಹಣ ಖರ್ಚು ಬರುತ್ತದೆ ಎಂದರೆ ಸಾಕ್ಷಿ ಇರಬಹುದು ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯತ್ತಾರೆ. ದಾವಾ

ಅನುಸೂಚಿ ಐಟಂ ನಂಃ 10 ಜಾಗದಲ್ಲಿ ಪ್ರತಿವಾದಿ 15 ರವರು ಖರೀದಿ ಮಾಡಿದ ನಂತರದಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಅಡಿಕೆ ತೋಟವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. ದಿನಾಂಕಃ 23.06.1992 ರಲ್ಲಿ ಪ್ರತಿವಾದಿ 15 ಪ್ರತಿವಾದಿ 9 ರವರ ಗಂಡನಿಂದ ದಾವಾ ಅನುಸೂಚಿ ಐಟಂ ನಂಃ 3 ರ ಸ್ವತಿನ ಪೈಕಿ 30 ಗುಂಟೆ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವಿಷಯವು ನನಗೆ 2018 ರಲ್ಲಿ ತಿಳಿದುಬಂದಿರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ದಾವಾ ಅನುಸೂಚಿ ಐಟಂ ನಂಃ 3 ರಲ್ಲಿ ಉಳಿದ ಅಂದರೆ 1 ಎಕರೆ 26 ಗುಂಟೆ ಆಸ್ತಿಯನ್ನು ಪ್ರತಿವಾದಿ 9 ರವರ ಗಂಡನಿಂದ ಪ್ರತಿವಾದಿ 14 ರವರು ದಿನಾಂಕಃ 31.12.1998 ರಂದು ನಿಪಿ-13 ರ ಕ್ರಯಪತ್ರದಂತೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವಿಷಯ 2018 ರಲ್ಲಿ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ.

5. ದಾವಾ ಅನುಸೂಚಿ ಐಟಂ ನಂಃ 3 ರಲ್ಲಿ ಪ್ರತಿವಾದಿ 14 ಮತ್ತು 15 ರವರಿಗೆ ಮಾರಾಟ ಮಾಡಿ ಉಳಿದ ಆಸ್ತಿಯ ಅಭಿವೃದ್ಧಿಗಾಗಿ ಪ್ರತಿವಾದಿ 14 ಮತ್ತು 15 ರವರಿಗೆ ಪ್ರತಿವಾದಿ 9 ರವರ ಗಂಡ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-13 ಕ್ರಯಪತ್ರದಲ್ಲಿ ನಮೂದಿಸಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ ಮತ್ತು ಅದರಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ. ದಾವಾ ಅನುಸೂಚಿ ಐಟಂ ನಂಃ 3 ತರಿ ಜಮೀನು ಆಗಿತ್ತು ಎಂದರೆ ಸರಿ. ಪ್ರಸ್ತುತ ದಾವಾ ಅನುಸೂಚಿ ಐಟಂ ನಂಃ 3 ಅಡಿಕೆ ತೋಟವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-13 ರಂತೆ ಪ್ರತಿವಾದಿ 14 ರವರು ಆಸ್ತಿಯನ್ನು ಖರೀದಿ ಮಾಡಿದ ನಂತರದಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಆಸ್ತಿಯನ್ನು ಅಭಿವೃದ್ಧಿಪಡಿಸಿ ಅಡಿಕೆ ತೋಟವನ್ನು ನಿರ್ಮಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 14 ರವರು ಖರೀದಿ ಮಾಡಿದ ಆಸ್ತಿಗಳಲ್ಲಿ ಅಡಿಕೆ ಬೆಳೆ ಇರುವ ಬಗ್ಗೆ ನಾನು ಹಾಜರುಪಡಿಸಿರುವ ನಿಪಿ-7 ಪಹಣಿಗಳಲ್ಲಿ ಕಾಣುತ್ತದೆ ಎಂದರೆ ಸರಿ. ತರಿ ಜಮೀನಿಗಿರುವ ಬೆಲೆಗೂ ಹಾಗೂ ಅಡಿಕೆ ತೋಟಕ್ಕಿರುವ ಬೆಲೆಗೂ ಅಜಗಜಾಂತರ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

6. ನಿಪಿ-13 ಕ್ರಯಪತ್ರ ಆದ ನಂತರದಲ್ಲಿ ಪ್ರತಿವಾದಿ14 ರವರ ಹೆಸರಿಗೆ ಖಾತಾ ಬದಲಾವಣೆ ಆಗಿ ಇಲ್ಲಿಯವರೆಗೂ ಅವರ ಹೆಸರಿನಲ್ಲೆ ಸದರಿ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಇರುತ್ತದೆ ಎಂದರೆ ಸರಿ. ನಿಪಿ-13 ಕ್ರಯಪತ್ರದಂತೆ ಆಸ್ತಿಯನ್ನು ಖರೀದಿ ಮಾಡಿದ ದಿನದಿಂದ ಈವರೆಗೂ ಪ್ರತಿವಾದಿ 14 ರವರು ಸದರಿ ಆಸ್ತಿಗಳಲ್ಲಿ ಬೇಸಾಯ ಮಾಡಿ ಅಭಿವೃದ್ದಿಪಡಿಸುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

7. ಪ್ರತಿವಾದಿ 14 ಮತ್ತು 15 ರವರು ಅವರು ಖರೀದಿ ಮಾಡಿದಂತಹ ಆಸ್ತಿಗಳಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡಿ ಅಭಿವೃದ್ದಿಪಡಿಸಿ, ಕಾಲಕಾಲಕ್ಕೆ ವ್ಯವಸಾಯ ಹಾಗೂ ಅಭಿವೃದ್ದಿಪಡಿಸುವುದಕ್ಕಾಗಿ ಬ್ಯಾಂಕಿನಲ್ಲಿ ಸಾಲವನ್ನು ಪಡೆದಿರುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ 2018 ರಲ್ಲಿ ದಾಖಲೆ ನೋಡಿದ ನಂತರ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-2 ವಿಭಾಗಪತ್ರದಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವಿಭಾಗಪತ್ರ ಆದ ಸಮಯದಲ್ಲಿ ನಾನು ಹಾಜರಿರುವುದಿಲ್ಲ ಆದರೆ ನಾನು ಒಬ್ಬ ಹಿಸ್ಸೆದಾರಳಾಗಿದ್ದು ನನಗೆ ಸದರಿ ವಿಭಾಗಪತ್ರದಡಿ ಯಾವುದೇ ಆಸ್ತಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ14 ಮತ್ತು 15 ರವರು ನಿಪಿ-2 ವಿಭಾಗಪತ್ರ, ಕಂದಾಯ ದಾಖಲೆಗಳು ಮತ್ತು ಸ್ವತ್ತಿನ ಸ್ವಾಧೀನವನ್ನು ಪರಿಶೀಲಿಸಿ ಪ್ರತಿವಾದಿ 6 ಮತ್ತು ಪ್ರತಿವಾದಿ 9 ರವರ ಗಂಡನಿಂದ ಮೇಲೆ ಹೇಳಿದಂತೆ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 14 ಮತ್ತು 15 ರವರು ಸದರಿ ಆಸ್ತಿಗಳಿಗೆ ಸಂಬಂಧಪಟ್ಟಂತೆ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಪ್ರತಿವಾದಿ 6 ಮತ್ತು 9 ರವರ ಗಂಡನಿಗೆ ಸದರಿ ಆಸ್ತಿಗಳಲ್ಲಿ ಸಂಪೂರ್ಣ ಹಕ್ಕು ಇರುವ ಬಗ್ಗೆ ಹಾಗೂ ಅವರೇ ಆಸ್ತಿಗಳಲ್ಲಿ ಸ್ವಾಧೀನದಲ್ಲಿ ಇರುವ ಬಗ್ಗೆ ಖಾತ್ರಿಪಡಿಸಿಕೊಂಡು ಅವರಿಂದ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

8. 1980 ನೇ ಇಸವಿಯಲ್ಲಿ ಹೆಣ್ಣು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಸದರಿ ಆಸ್ತಿಗಳಲ್ಲಿ ಹಕ್ಕು ಇರುತ್ತದೆ ಎಂದರೆ ನುಡಿಯುತ್ತಾರೆ. ದಾವಾ ಅನುಸೂಚಿ ಐಟಂ ನಂಃ 3 ಮತ್ತು 10 ರ ಬಗ್ಗೆ ಆದ

ಕ್ರಯಪತ್ರಗಳನ್ನು ಪ್ರಶ್ನಿಸುವ ಹಕ್ಕು ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ . ನಾನು ಈಗ ವಿನಾ ಕಾರಣ ಅನಾವಶ್ಯಕವಾಗಿ ಪ್ರತಿವಾದಿ 14 ಮತ್ತು 15 ರವರನ್ನು ಈ ದಾವೆಯಲ್ಲಿ ಪಾರ್ಟಿಗಳನ್ನಾಗಿ ಮಾಡಿ ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ವಿಭಾಗಪತ್ರ ಹಾಗೂ ಪ್ರತಿವಾದಿ 14 ಮತ್ತು 15 ರವರು ಆಸ್ತಿಗಳನ್ನು ಖರೀದಿ ಮಾಡಿದ ಬಗ್ಗೆ ನನಗೆ ಈ ಪೂರ್ವದಲ್ಲೇ ಸಂಪೂರ್ಣ ಮಾಹಿತಿ ಇದ್ದು 2017-18 ರಲ್ಲಿ ಮಾಹಿತಿ ಸಿಕ್ಕಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

9. ದಾವಾ ಅನುಸೂಚಿ ಐಟಂ ನಂಃ 10 ಕ್ಕೆ ಸಂಬಂಧಪಟ್ಟ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲೆಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ 14 ರವರು ದಾವಾ ಅನುಸೂಚಿ ಐಟಂ ನಂಃ 3 ರವರ ಪೈಕಿ ಖರೀದಿಸಿದ 1 ಎಕರೆ 26 ಗುಂಟೆ ಆಸ್ತಿಯು ಪ್ರಸ್ತುತ ಮ್ಯುಟೇಶನ್ ಪೋಡಾಗಿ ಸರ್ವೆ ನಂಃ 72/4 ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಗೆ ಸಂಬಂಧಪಟ್ಟ 2023-24 ನೇ ಸಾಲಿಗೆ ಸಂಬಂಧಪಟ್ಟ 2 ಪುಟಗಳ ಪಹಣಿಯನ್ನು ಸಾಕ್ಷಿಗೆ ತೋರಿಸಲಾಗಿ ಅವರು ಅದನ್ನು ಒಪ್ಪಿದ ಕಾರಣ ಸದರಿ ಪಹಣಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ಅದೇ ರೀತಿ ಪ್ರತಿವಾದಿ 15 ರವರು ಖರೀದಿ ಮಾಡಿದ ದಾವಾ ಐಟಂ ನಂಃ 3 ರ ಪೈಕಿ 30 ಗುಂಟೆ ಆಸ್ತಿಗೆ ಸಂಬಂಧಪಟ್ಟ ಪಹಣಿಯನ್ನು ನಾನು ಈವರೆಗೆ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ನ್ಯಾಯಾಲಯದಲ್ಲಿ ಸುಳ್ಳುಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲು ಃ ಪ್ರತಿವಾದಿ 12 ಮತ್ತು 13 ರವರ ಪರ ಶ್ರೀ. ಜಿ ಎಂ ವಿ ವಕೀಲರಿಂದ ಃ**

ಪ್ರತಿವಾದಿ 12 ಮತ್ತು 13 ರವರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲನ್ನು ಮುಂದೂಡಲು ಯಾವುದೇ ಸಕಾರಣಗಳು ಇಲ್ಲದ ಕಾರಣ ಪ್ರತಿವಾದಿ 12 ಮತ್ತು 13 ರವರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 29.05.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ಶೃಂಗೇರಿ

ಸಾಕ್ಷಿ ಸಹಿಃ